# ಶ್ರೀಮಾತೆಯವರ ಮಧುರ ಸ್ಮೃತಿ

**ಸ್ವಾಮಿ ವಾಸುದೇವಾನಂದ**

*ಅನುವಾದ* : ಸ್ವಾಮಿ ಶಾಂತಿನಾಥಾನಂದ

(*ಹಿಂದಿನ ಸಂಚಿಕೆಯಿಂದ* )



**ಒ**ಬ್ಬ ವ್ಯಕ್ತಿ ತುಂಬಾ ಚಂಚಲ ಸ್ವಭಾವದವನಾಗಿದ್ದ. ಶ್ರೀಮಾತೆಯವರು ಅವನಿಗೆ ಸ್ವಲ್ಪ ಸ್ಥಿರಭಾವದಿಂದ ಜಪ ಧ್ಯಾನ ಮಾಡಲು ಹೇಳಿದರು. ಅವನು ಹೇಳಿದ, **"**ಅಮ್ಮಾ, ಮನಸ್ಸು ಸ್ಥಿರವಾಗದಿದ್ದರೆ ನಾನು ಏನು ಮಾಡಲಿ?**"** ಶ್ರೀಮಾತೆ ಹೇಳಿದರು, **"**ಧ್ಯಾನ ಮಾಡುವುದು ಕಷ್ಟ. ನಮಗೆ (ಹೆಂಗಸರಿಗೆ) ಜಪದಿಂದಲೇ ಎಲ್ಲಾ ಆಗುತ್ತೆ. ಧ್ಯಾನ ಮಾಡಲಾಗದಿದ್ದರೆ, ನೀನೂ ಜಪವನ್ನೇ ಮಾಡು. ಮನಸ್ಸನ್ನು ದೃಢವಾಗಿಟ್ಟುಕೊಂಡು ಮಾಡ ಬೇಕಾಗುತ್ತದೆ. ದಿನವೂ ಹತ್ತಿಪ್ಪತ್ತು ಸಾವಿರ ಜಪ ಮಾಡಿ ನೋಡು, ಹೇಗೆ ಮನಸ್ಸು ಬಗ್ಗುತ್ತೆ ಎಂದು. ಆಗಲೂ ಮನಸ್ಸು ನಿಯಂತ್ರಣಕ್ಕೆ ಬಾರದಿದ್ದರೆ ಕೇಳು. ಸಾಧುಸಂನ್ಯಾಸಿಗಳಿಗಲ್ಲದೆ, ಬೇರೆಯವರಿಗೆ ಧ್ಯಾನ ಮಾಡುವುದು ತುಂಬಾ ಕಷ್ಟದ ವಿಷಯ. ಕೇವಲ ಗಂಡಸಾದರೆ ಸಾಲದು. ಮನಸ್ಸಿನಲ್ಲಿ ಶಕ್ತಿ ಇರಬೇಕು, ವೈರಾಗ್ಯವಿರಬೇಕು. ಆಶಾರಹಿತನಾಗಿದ್ದು ಭಗವಂತನ ಮೇಲೆ ಪ್ರೇಮ ಉಂಟಾಗದಿದ್ದರೆ ಧ್ಯಾನ ಮಾಡುವುದು ಬಹಳ ಕಷ್ಟ. ಧ್ಯಾನಸಿದ್ಧರು ನಾಲ್ಕು ತರಹ ಇರುತ್ತಾರೆ: ೧) ಜನ್ಮದಿಂದಲೇ ಪುಣ್ಯವನ್ನು ಗಳಿಸಿಕೊಂಡು ಬಂದವರು ೨) ಗುರುವಿನ ಉಪದೇಶದಲ್ಲಿ ಶ್ರದ್ಧೆಯಿಟ್ಟು ವಿವಿಧ ಪ್ರಕಾರದ ಸಾಧನೆಗಳ ಅಭ್ಯಾಸದಿಂದ ಧ್ಯಾನಸಿದ್ಧರಾದವರು; ೩) **ಕೃಪಾಸಿದ್ಧರು** – ಠಾಕೂರರು ಹೇಳುವಂತೆ, ಗುರುವೇ ಕೃಪೆ ಮಾಡಿ ಅಂಥವರ ಮನಸ್ಸನ್ನು ಸಂಸಾರದಿಂದ ಮೇಲಕ್ಕೆತ್ತಿದ್ದಾನೆ. ಅವರ ಮನಸ್ಸು ನೀರಿನಲ್ಲಿರುವ ಕಮಲದ ಹಾಗೆ ಅಂಟಿಕೊಳ್ಳದೆ ಇರುತ್ತದೆ. ೪) **ಸಹನಾಸಿದ್ಧರು** – ಠಾಕೂರರು ಹೇಳುತ್ತಾರೆ, ಒಬ್ಬ ವ್ಯಕ್ತಿಗೆ ಯಾವುದೋ ಕಾರಣದಿಂದ ಬೇರೆಯವರ ಸಂಪತ್ತು ಸಿಕ್ಕಿತಂತೆ. ಅದು ಸಿಕ್ಕಿದ್ದು ಅವನ ಪೂರ್ವಜನ್ಮದ ತಪಸ್ಸಿನಿಂದ. ಯಾವುದೋ ಮೋಹದಲ್ಲಿ ಬಿದ್ದು, ಪ್ರಾರಬ್ಧ ಭೋಗಿಸುತ್ತಿದ್ದ; ಯಾವಾಗ ಪ್ರಾರಬ್ಧ ಕಳೆಯಿತೋ, ಆಗ ದಾರಿಯಲ್ಲಿ ಹೋಗುತ್ತಿದ್ದಾಗ ಬಹು ಅಮೂಲ್ಯವಾದ ರತ್ನ ದೊರಕಿಬಿಟ್ಟಿತು.**"**

**"**ಈ ಸಲ ಠಾಕೂರರು ಜನರ ಕಲ್ಯಾಣಕ್ಕೋಸ್ಕರ ಕಠೋರ ತಪಸ್ಸುಮಾಡಿ ಹೋಗಿದ್ದಾರೆ. ಅವರ ಶರೀರದಲ್ಲಿ ಚರ್ಮ ಮತ್ತು ಮೂಳೆ ಮಾತ್ರ ಉಳಿದಿತ್ತು. ಹಾಗಿದ್ದರೂ ಜನರ ಪಾಪವನ್ನು ತೆಗೆದುಕೊಂಡು ರೋಗವನ್ನು ಅನುಭವಿಸಿದರು. ಅವರ ಮೇಲೆ ಭಕ್ತಿ ಶ್ರದ್ಧೆ ವಿಶ್ವಾಸಗಳನ್ನಿಟ್ಟರೆ, ಅವರ ನಾಮಜಪ ಮಾಡಿದರೆ, ಅವರ ಲೀಲೆಯನ್ನು ಧ್ಯಾನ ಮಾಡಿದರೆ, ಕುಂಡಲಿನಿಯು ಆನಂದದಿಂದ ಸ್ವಯಂ ಜಾಗೃತವಾಗುವುದು. ಇದಕ್ಕೆ ಸ್ವಲ್ಪವೂ ಕಠೋರತೆ ಇರಬೇಕಾಗಿಲ್ಲ. ಇಂದಿನ ಯುಗ ಕಲಿಯುಗ. ಸತ್ಯ ಯುಗ, ತ್ರೇತಾಯುಗದ ಜನರಂತೆ ಇಂದಿನ ಜನರು ತಪಸ್ಸು ಮಾಡಬಲ್ಲರೇನು? ಈ ಯುಗದಲ್ಲಿ ಪ್ರಾಣ ಅನ್ನಗತವಾಗಿದೆ. ಠಾಕೂರರ ನಾಮವನ್ನು ತೆಗೆದುಕೋ. ನೀನೇ ನೋಡುವೆ, ಅವರು ಆಹಾರ ನೀರಿನ ವ್ಯವಸ್ಥೆ ಮಾಡುತ್ತಾರೆ. ಠಾಕೂರರ ನಾಮಸ್ಮರಣೆ ಮಾಡಿದರೆ ಈ ಸಲ ಯಾರಿಗೂ ಆಹಾರದ ಅಭಾವವಾಗುವುದಿಲ್ಲ. ಅವರು ಸಾಮಾನ್ಯ ಆಹಾರ ಬಟ್ಟೆಗಳ ವ್ಯವಸ್ಥೆ ಮಾಡಿ ಹೋಗಿದ್ದಾರೆ. ಗುರು– ಈಶ್ವರರ ಸಹಾಯವಿಲ್ಲದೆ ಯಾರಾದರೂ, ಸ್ವತಃ ಬಂಧನದಿಂದ ಮುಕ್ತರಾಗಬಲ್ಲರೇನು? ಇದರಿಂದ ಠಾಕೂರರು ಅತಿ ಕಠೋರ ತಪಸ್ಸು ಮಾಡಿ, ಅದರ ಫಲವನ್ನು ಒಟ್ಟುಗೂಡಿಸಿ, ಮುಂದೆ ಬರುವ ತಮ್ಮ ಭಕ್ತರಿಗೆ ಬಿಟ್ಟುಹೋಗಿದ್ದಾರೆ. ಅವರು ಕೃಪೆ ಮಾಡಿ ಬಾಗಿಲಲ್ಲೇ ನಿಂತಿದ್ದಾರೆ, ಈಗ ನೀನು ಬಾಗಿಲನ್ನು ತೆಗೆದರೆ ಎಲ್ಲವೂ ಸಾಧ್ಯವಾಗುತ್ತದೆ.**"**

**"**ಈ ಹಿಂದೆ ಭಗವಂತನು ಬಂದು ಸತ್ಯಕ್ಕೋಸ್ಕರ ಆನಂದ ದಿಂದ ಶಿಲುಬೆಗೇರಿ, ಜೀವರ ಪ್ರಾಯಶ್ಚಿತ್ತರೂಪವಾದ ಆ ತ್ಯಾಗಫಲ ವನ್ನು ವಿಶ್ವಾಸಿಗಳಾದ ಭಕ್ತರಿಗೆ ಕಾಯ್ದಿರಿಸಿ ಹೋದನು..... ಈ ಸಲ ಅವರ ಕಠೋರ ತಪಸ್ಸು, ವ್ರತ, ಸಾಧನೆ, ಭಜನೆ ಎಲ್ಲವೂ

ಭಕ್ತರಿಗೋಸ್ಕರ ಮತ್ತು ಜ್ಞಾನಪಿಪಾಸುಗಳಿಗೋಸ್ಕರ. ವಿಶ್ವಾಸವುಳ್ಳ ಭಕ್ತರಿಗೆ ಸ್ವಲ್ಪವೇ ಸಾಧನೆ–ಭಜನೆಗಳಿಂದ ಕುಂಡಲಿನಿ ಜಾಗೃತಳಾಗಿ ಬಿಡುತ್ತಾಳೆ. 'ಬೆಳಗಿನ ಜಾವವಾಗಿದೆ, ಏಳು, ಬಾಗಿಲು ತೆಗೆದು ನೋಡು, ಎದುರಿಗೇ ಸೂರ್ಯ ನಿಂತಿದ್ದಾನೆ.' "

ಒಂದು ಸಲ ನನಗೆ 'ಇನ್‌ಫ್ಲೂಯೆಂಜಾ' ಆಯಿತು. ನಾನು ಶ್ರೀಮಾತೆಯವರಿಗೆ ಹೇಳಿದೆ, "ಮೊದಲೇ ಸಾಮಾನ್ಯವಾಗಿ ಮನಸ್ಸು ಸ್ಥಿರವಾಗಿರುವುದಿಲ್ಲ, ಸಾಲದ್ದಕ್ಕೆ ಶರೀರ ಕೂಡ ಅಸ್ವಸ್ಥವಾಗಿದೆ, ಜಪಾದಿಗಳನ್ನು ಮಾಡಲು ಸ್ವಲ್ಪವೂ ಇಷ್ಟವಾಗುವುದಿಲ್ಲ." ಶ್ರೀಮಾತೆ ಹೇಳಿದರು, "ನೋಡು, ಮನಸ್ಸನ್ನು ಎರಡು ಭಾಗಗಳನ್ನಾಗಿ ಮಾಡಬೇಕಾಗುವುದು. ಅದರ ಒಂದು ಭಾಗ ವಿವೇಕಿ. ಎರಡನೆಯ ಭಾಗ ಸಣ್ಣ ಮಗುವಿನಂತೆ ಅವಿವೇಕಿ. ತಂದೆ ತಾಯಿಯರಂತೆ ವಿವೇಕ ಮನಸ್ಸು ಸರ್ವದಾ ಅವಿವೇಕಿ ಮನಸ್ಸಿನ ಹಿಂದಿರುತ್ತದೆ. ಸ್ವಲ್ಪವಾದರೂ ಆ ಕಡೆ ಈ ಕಡೆ ಹೋದರೆ ಅದನ್ನು ಹತೋಟಿಯಲ್ಲಿಡುತ್ತದೆ. ದುಷ್ಟಮಗುವನ್ನು ತಂದೆತಾಯಿಗಳು ಬೈದು, ರಮಿಸಿ ಹೇಗೆ ಹತೋಟಿಗೆ ತರುತ್ತಾರೆ, ನೋಡಿಲ್ಲವೇನು? ಹೀಗೆ ಕೆಲವು ದಿನಗಳು ಅಭ್ಯಾಸ ಮಾಡಿದರೆ, ನೀನೇ ಕಂಡುಕೊಳ್ಳುತ್ತೀಯೆ, ಮನಸ್ಸು ಹೇಗೆ ವಶವಾಗುವುದು ಎಂದು. ಆದರೆ, ಅವಿವೇಕ ಮನಸ್ಸಿನಲ್ಲಿ ಯಾವ ವಿಷಯದಲ್ಲಾದರೂ ಬಹುದಿನಗಳ ಫಲಸ್ವರೂಪವಾದ ದೃಢಸಂಸ್ಕಾರ ಅಚ್ಚೊತ್ತಿದ್ದರೆ, ಬೇಡವೆಂದರೂ ಅದು ಹೋಗಲಿಚ್ಛಿಸುವುದಿಲ್ಲ. ಆಗ, ಆ ದುರ್ಬಲ ಮನಸ್ಸನ್ನು ಸರಿಪಡಿಸುವಂತೆ ಠಾಕೂರರಲ್ಲಿ ಪ್ರಾರ್ಥಿಸು. ಇದನ್ನು ಬಿಟ್ಟು ಬೇರೆ ಉಪಾಯವಿಲ್ಲ. ಅವರು ಈಶ್ವರ; ಎಲ್ಲವನ್ನೂ ಮಾಡಬಲ್ಲರು. ಒಂದು ಬಗೆಯ ಸಂಸ್ಕಾರವನ್ನು ಬದಲಾಯಿಸಿ ಅದನ್ನು ಬೇರೆ ರೀತಿಯಲ್ಲಿ ತಿರುಗಿಸಬಲ್ಲರು. ನಾನು ನೋಡಿದ್ದೇನೆ, ಠಾಕೂರರ ಇಚ್ಛೆಯ ಮುಂದೆ ಮನುಷ್ಯರ ಮನಸ್ಸು ಜೇಡಿಮಣ್ಣಿನ ಮುದ್ದೆಯಂತಾಗುತ್ತಿತ್ತು. ಅವರು ಒಂದು ಅಚ್ಚನ್ನು ಬದಲಾಯಿಸಿ ಬೇರೊಂದನ್ನು ಮಾಡಬಲ್ಲರು. ಜನರನ್ನು ತಮ್ಮ ಇಚ್ಛೆಯಂತೆ ಅವರು ಬದಲಾಯಿಸುತ್ತಿದ್ದರು."

ಉದ್ಬೋಧನದಲ್ಲಿ ಒಂದು ದಿನ ಶಕ್ತಿತತ್ತ್ವದ ಬಗ್ಗೆ ಚರ್ಚೆ ಯಾಗುತ್ತಿತ್ತು. ಒಬ್ಬಾತ ಹೇಳಿದರು, "ಅದೆಲ್ಲವನ್ನೂ ಬಿಡಿ, ಸ್ವಲ್ಪ ಠಾಕೂರರ ಬಗ್ಗೆ ಹೇಳಿ, ಕೇಳೋಣ." ಆಗಲೇ ಯೋಗಿನ್ ಮಾ ಸ್ನಾನ ಮುಗಿಸಿ ಕೊಠಡಿಗೆ ಬಂದಿದ್ದಳು. ಆಕೆ ಹೇಳಿದಳು, "ಠಾಕೂರರ ಚರ್ಚೆ ಶುರುವಾದರೂ, ಮೊದಲು ಶಕ್ತಿತತ್ತ್ವದ ವಿಷಯವೇ ಬರುವುದು. ಯಾವಾಗ ಅವರು ತೀವ್ರವ್ಯಾಕುಲತೆಯಿಂದ ಕಾಳೀ ಮಂದಿರದ ಖಡ್ಗವನ್ನು ಕೈಗೆತ್ತಿಕೊಂಡು, "ದರ್ಶನ ಕೊಡುವ ಹಾಗಿದ್ದರೆ ಕೊಡು, ಇಲ್ಲದಿದ್ದರೆ ಕತ್ತು ಕತ್ತರಿಸಿಕೊಳ್ಳುತ್ತೇನೆ" ಎಂದು ಹೇಳಿದರೋ, ಆ ಕ್ಷಣ ಕಾಳೀ ಮಾತೆ ಅಲ್ಲಿ ಪ್ರಕಟಳಾದಳು.. ಅವರ ಪಾಲಿಗೆ ಜಗತ್ತಿನ ಆವರಣ ಸರಿಯಿತು, ಎಲ್ಲವೂ ಚಿನ್ಮಯವಾಗಿ ಕಾಣಿಸುತ್ತಿತ್ತು. ಕೇವಲ ಮೂರ್ತಿ ಒಂದೇ ಅಲ್ಲ, ಪೂಜೆಯ ಉಪಕರಣಗಳೂ ಕೂಡ ಚಿನ್ಮಯವಾಗಿಯೇ ತೋರಿಬರುತ್ತಿತ್ತು."

ನಾನು ಹೇಳಿದೆ, "ಮಹಾಪುರುಷ್ ಮಹಾರಾಜರು (ಸ್ವಾಮಿ ಶಿವಾನಂದಜಿ) ಒಂದು ಸಲ ಹೀಗೆ ಹೇಳಿದರು: ಅವರು ಮತ್ತು ರಾಖಾಲ್ ಮಹಾರಾಜರು (ಸ್ವಾಮಿ ಬ್ರಹ್ಮಾನಂದಜಿ) ಠಾಕೂರರ ಕೊಠಡಿಯಲ್ಲಿ ಕುಳಿತಿದ್ದರು. ಠಾಕೂರರು ಮಂಚದ ಮೇಲೆ, ಇವರೆಲ್ಲ ಕೆಳಗೆ ಚಾಪೆಯ ಮೇಲೆ ಕುಳಿತಿದ್ದರು. ಸಂಜೆ ಆಗುತ್ತಿದ್ದಂತೆಯೇ, ಮಂದಿರದಲ್ಲಿ ಆರತಿಗಾಗಿ ಕೈತಾಳ ಮತ್ತು ಗಂಟೆಗಳ ನಾದ ಆರಂಭವಾಯಿತು. ಅವರು ಆರತಿ ನೋಡಲು ಉತ್ಸುಕರಾದರು. ಆಗ ತಮ್ಮ ಮುಂದೆ ಕಾಳೀ ಮಾತೆಯೇ ಪ್ರತ್ಯಕ್ಷಳಾಗಿದ್ದುದನ್ನು ಠಾಕೂರರು ನೋಡಿದರು!

ಯೋಗೀನ್ ಮಾ ಹೇಳಿದಳು, "ಮಥುರ ಬಾಬು ಕಂಡ ದೃಶ್ಯ ಇದು. ಠಾಕೂರರು ತಮ್ಮ ಕೊಠಡಿಯ ಉತ್ತರ–ಪೂರ್ವ ವರಾಂಡಾದಲ್ಲಿ ಓಡಾಡುತ್ತಿದ್ದಾರೆ. ಮುಂದೆ ಬರುತ್ತಿದ್ದಾಗ ಶಿವನಂತೆ ಕಾಣುತ್ತಿದ್ದರು. ಹಿಂದಿರುಗಿ ನಡೆಯುವಾಗ ಹರಡಿದ ಕೇಶರಾಶಿಯ ಕಾಳೀ ಮಾತೆ ಹೋಗುತ್ತಿದ್ದಾಳೆ! ಯಾರು ರಾಮ ನಾಗಿದ್ದನೋ, ಯಾರು ಕೃಷ್ಣನಾಗಿದ್ದನೋ ಅವನೇ ಈ ಯುಗದಲ್ಲಿ ರಾಮಕೃಷ್ಣನಾಗಿದ್ದಾನೆ; ಭಗವಂತನು ಯೋಗಮಾಯೆಯ ಜೊತೆ ಗೂಡಿ ಆವಿರ್ಭಾವವಾಗಿದ್ದಾನೆ. ಆಯಾನ್ ಘೋಷನ ತಂಗಿ ಕುಟಿಲಾ, ಅವನ ಪತ್ನಿ ರಾಧೆಯು, ಕೃಷ್ಣನ ಜೊತೆ ವನಕ್ಕೆ ಹೋದಳು ಎಂದು ಅವನಿಗೆ ಹೇಳಿದಳು. ಇದನ್ನು ಕೇಳಿ ಆಯಾನ್ ಇದು ಸತ್ಯವಾದರೆ ರಾಧೆಯನ್ನು ಕತ್ತರಿಸಿಹಾಕುತ್ತೇನೆಂದು ಕೈಲಿ ಖಡ್ಗಹಿಡಿದು ಹೋದ. ವನದಲ್ಲಿ ಹೋಗಿ ನೋಡುತ್ತಾನೆ, ಅಲ್ಲಿ ಖಡ್ಗಮುಂಡಧಾರಿ ಯಾದ ಕಾಳೀಮಾತೆಗೆ ರಾಧಾರಾಣಿ ಪೂಜೆ ಮಾಡುತ್ತಿದ್ದಾಳೆ! ಆಗ ಅವನು ಹೇಳಿದ, 'ಎಲೇ ಕುಟಿಲೆ! ಕೃಷ್ಣ ಎಲ್ಲಿದ್ದಾನೆ? ಇಲ್ಲಿ ನಾನು ನೋಡುತ್ತಿರುವುದು ಕಪಾಲಿನೀ ಕಾಳಿಯನ್ನು.' ಶ್ರೀಕೃಷ್ಣನನ್ನು ತನ್ನ ಇಷ್ಟಮೂರ್ತಿಯ ರೂಪದಲ್ಲಿ ನೋಡಿ ಆಯಾನ್ ಘೋಷ್ ಆನಂದಿತನಾಗಿ ಹಿಂತಿರುಗಿದ."

ಠಾಕೂರರು ಹೇಳುತ್ತಿದ್ದರು, "ಚೈತನ್ಯ ಮತ್ತು ಕಾಳೀ ಒಂದೇ ಎಂದು ಅರಿವಾದರೆ ತಿಳಿದುಕೋ, ಸರಿಯಾದ ಜ್ಞಾನ ಪ್ರಾಪ್ತವಾಗಿದೆ" ಎಂದು. ಗೋಪಾಲನ ತಾಯಿ ನಮ್ಮ ಠಾಕೂರರನ್ನು ಗೋಪಾಲನ ರೂಪದಲ್ಲೇ ನೋಡುತ್ತಿದ್ದಳು. ನೀರದ್ ಮಹಾರಾಜರ ತಾಯಿಗೆ (ನಿಸ್ತಾರಿಣಿ ದೇವಿ), ರಾಮಕೃಷ್ಣಪುರದ ಮನೆಯಲ್ಲಿ ಠಾಕೂರರಲ್ಲಿ ಆಕೆಯ ಇಷ್ಟದೈವವಾದ ರಾಮಚಂದ್ರನ ದರ್ಶನವಾಯಿತು. ಆಕೆ ರಾಮಚಂದ್ರನಿಗೆ ಸಾಷ್ಟಾಂಗ ಪ್ರಣಾಮ ಮಾಡಿ, ಚರಣಧೂಳಿ ಯನ್ನು ತೆಗೆದುಕೊಂಡು, ಮತ್ತೆ ತಲೆ ಎತ್ತಿ ನೋಡಿದರೆ ಠಾಕೂರರೇ ಇದ್ದರು. ಅವರು ನಗುತ್ತಾ ಹೇಳಿದರು, "ಏನಮ್ಮಾ! ಈಗ ನಂಬಿಕೆ ಬಂತೇ?"

ಠಾಕೂರರನ್ನು ಬಿಟ್ಟು ಅನ್ಯ ದೇವದೇವಿಯರ ಚಿಂತನೆಯನ್ನು ಮಾಡಲಾಗುವುದಿಲ್ಲ. ಅವರೆಲ್ಲರ ಚಿಂತನೆಯನ್ನು ಮಾಡಿದಾಗಲೇ, ಠಾಕೂರರ ಚಿಂತೆಯೂ ಆದ ಹಾಗೆ ಆಗುತ್ತದೆ. ಒಂದು ದಿನ ಠಾಕೂರರ ಮತ್ತು ಸಿದ್ಧೇಶ್ವರೀ ದೇವಿಯ ಚರಣಾಮೃತವನ್ನು (ತೀರ್ಥ) ಎರಡು ಬೇರೆ ಬೇರೆ ಪಾತ್ರೆಗಳಲ್ಲಿ ಶ್ರೀಮಾತೆಯವರ

ಸಮೀಪಕ್ಕೆ ತೆಗೆದುಕೊಂಡು ಹೋದಾಗ ಅವರು ಹೇಳಿದರು, "ಎರಡೂ ಒಂದೇ! ಬೆರೆಸಿಬಿಡು; ಈಗಲೇ ಬೆರೆಸು, ನನ್ನ ಮುಂದೆಯೇ ಬೆರೆಸು." ಎರಡನ್ನೂ ಬೆರೆಸಿದ ಮೇಲೆಯೇ ಅವರಿಗೆ ಸಮಾಧಾನವಾದದ್ದು.

ಗೋಲಾಪ್ ಮಾ ಹೇಳುತ್ತಾಳೆ, "ಏನಾದರೂ ವಿಪತ್ತು ಅಥವಾ ಕಠಿಣ ಪರಿಸ್ಥಿತಿ ಬಂದರೆ ಶ್ರೀಮಾತೆ ಜ್ಞಾನಿಯ ತರಹ ವ್ಯವಹರಿಸುತ್ತಾರೆ. ಠಾಕೂರರು ರೋಗಗ್ರಸ್ತರಾಗಿದ್ದಾಗ, ಅವರು ತಾರಕೇಶ್ವರದಲ್ಲಿ ಪ್ರಾಯೋಪವೇಶ ಮಾಡಿದರು. ಆಗ ಮಡಕೆಗಳು ಒಡೆದ ಶಬ್ದ ಕೇಳಿಸಿತು. ಮಡಕೆಗಳು ನಾಶವಾಗುವುದು ಅಂದರೆ ಪಂಚಕೋಶಗಳ ರೂಪದಲ್ಲಿರುವ ದೇಹ ನಾಶವಾಗುವುದು ಎಂದರ್ಥ. ಆದರೆ ಆ ದೇಹದ ಒಳಗೆ ಏನಿದೆಯೋ ಅದು ಯಥಾವತ್ ಹಾಗೆಯೇ ಉಳಿಯುತ್ತದೆ. ಕೇವಲ ಭಕ್ತರಿಗೋಸ್ಕರ ಅವನು (ದೇವರು) ದಿವ್ಯಶರೀರವನ್ನು ಆಶ್ರಯಿಸಿ ಕೆಲವು ದಿನ ಲೀಲೆ ಮಾಡುತ್ತಾನೆ. ಅನಂತರ ಶ್ರೀಮಾತೆಗೇ ಅನ್ನಿಸಿತು, 'ಯಾರು ಯಾರ ಪತಿ ಮತ್ತು ಯಾರು ಯಾರ ಪತ್ನಿ?' ಎಂದು."

ಒಂದು ಸಲ ಶ್ರೀಮಾತೆಯವರು ರಾಸಬಿಹಾರಿ ಮಹಾರಾಜರಿಗೆ (ಮಾತೆಯ ಸೇವಕ, ಅರೂಪಾನಂದರು) ಹೇಳಿದರು, "ಈ ಜಗತ್ತು ಸ್ವಪ್ನದ ಹಾಗೆ. ಭಾವ, ಲೀಲೆ ಎಲ್ಲಾ ಸ್ವಪ್ನ. ನೀನು ನನ್ನ ಜೊತೆಯಲ್ಲಿ ಮಾತಾಡುತ್ತಿದ್ದೆಯಲ್ಲವೇ. ಇದು ಕೂಡ ಸ್ವಪ್ನ. ಠಾಕೂರರು ಮಾತ್ರವೇ ಸತ್ಯ." ನಾನು ಹೇಳಿದೆ, "ಪಂಚಕೋಶಗಳು ಒಡೆದು ಹೋದ ಮೇಲೆ (ದೇಹತ್ಯಾಗದ ನಂತರ) ಠಾಕೂರರಿಗೆ ಬ್ರಹ್ಮಸ್ವರೂಪವು ಪ್ರಾಪ್ತವಾಯಿತು. ಅನಂತರ ಕೂಡ ಲೀಲಾ ಶರೀರದ ಮಾತು ಕೇಳಿಬರುತ್ತದಲ್ಲವೇ. ಹಾಗೆಂದರೆ ಏನು?" ಶ್ರೀಮಾತೆ ಹೇಳಿದರು, "ಸಚ್ಚಿದಾನಂದವೇ ಅವರ ಸ್ವರೂಪವಾಗಿದೆ, ಆದರೆ ಯಾವಾಗಲಾದರೂ ಅವರು ದಿವ್ಯಶರೀರವನ್ನು ಧರಿಸಿ ಭಕ್ತರ ಜೊತೆ ಲೀಲೆಯಾಡುತ್ತಾರೆ." ಈ ಪ್ರಸಂಗದಲ್ಲಿ ಗೋಲಾಪ್ ಮಾ ಹೇಳಿದರು, "ಯಾರು ಎಲ್ಲದಕ್ಕೂ ಆಧಾರವೋ, ಶ್ರೀಮಾತೆಯವರು ಅದಕ್ಕನುಸಾರವಾಗಿಯೇ ಹೇಳುತ್ತಾರೆ. ಠಾಕೂರರು ನನಗೆ ಹೇಳುತ್ತಿದ್ದರು, 'ಶ್ಯಾಮನ ಜ್ಞಾನವೇ ನಿಜವಾದ ಜ್ಞಾನ, ಮಿಕ್ಕಿದ್ದೆಲ್ಲಾ ಅಜ್ಞಾನ. ಜಗತ್ತು, ಆಟ, ಲೀಲೆ – ಎಲ್ಲಾ ಮಿಥ್ಯೆ.' "

ಉದ್ಬೋಧನದಲ್ಲಿ ದೇಹತ್ಯಾಗಕ್ಕೆ ಮುಂಚೆ ಒಂದು ದಿನ ಗೋಲಾಪ್ ಮಾ ನನ್ನನ್ನು ಕರೆದು ಹೇಳಿದಳು, "ನೋಡು, ಹರಿಹರ, (ಲೇಖಕರ ಪೂರ್ವಾಶ್ರಮದ ಹೆಸರು – ಹರಿಹರ ಮುಖ್ಯೋಪಾಧ್ಯಾಯ), ನನಗನ್ನಿಸುತ್ತೆ, ಇನ್ನು ಈ ಶರೀರ ಇರುವುದಿಲ್ಲ. ಅಡಿಗಡಿಗೆ ನೋಡುತ್ತೇನೆ, ರುದ್ರಾಕ್ಷಿಮಾಲೆ ಹಾಕಿಕೊಂಡಿರುವ ತ್ರಿಶೂಲಧಾರಿಯಾದ ಒಬ್ಬ ಕಾಷಾಯವಸ್ತ್ರಧಾರಿಣಿಯಾದ ಮಹಿಳೆ ನನ್ನ ಶರೀರದಿಂದ ಹೊರಗೆ ಹೋಗುತ್ತಿದ್ದಾಳೆ ಮತ್ತು ಅದರ ನಂತರ ನನ್ನ ಶರೀರ ಒಂದು ಶವದಂತೆ ಬಿದ್ದಿರುತ್ತದೆ."

ನಾನು ರಾಸಬಿಹಾರಿ ಮಹಾರಾಜರಿಂದ ಹೀಗೆ ಕೇಳಿದ್ದೇನೆ: ಒಂದು ದಿನ ಕಾಶಿಯಲ್ಲಿ ಅವರು ಶ್ರೀಮಾತೆಯವರಿಗೆ ಹೇಳಿದರು, "ಅಮ್ಮಾ, ನನಗೆ ನಿರ್ವಾಣ ಬೇಡ. ಅದು ಸಿಕ್ಕರೆ ನಾನು ನಿನ್ನನ್ನು ಪಡೆಯಲಾಗುವುದಿಲ್ಲ." ಇದನ್ನು ಕೇಳಿ ಶ್ರೀಮಾತೆ ಹೇಳಿದರು, "ದಡ್ಡ ಹುಡುಗ! ನಿರ್ವಾಣವೇ ಠಾಕೂರರ ಸ್ವರೂಪ."

ಶ್ರೀಮಾತೆಯವರ ದೇಹತ್ಯಾಗದ ಬಹಳ ನಂತರದ ಮಾತು. ಒಂದು ಸಲ ನನ್ನ ಮನಸ್ಸು ತುಂಬಾ ಚಂಚಲವಾಯಿತು. ಧ್ಯಾನ–ಜಪ–ತಪ ಎಲ್ಲಾ ಯಾಂತ್ರಿಕವಾಗುತ್ತಿತ್ತು. ಮಾಡಲೇಬೇಕೆಂದು ಆಯಾ ಕಾಲದಲ್ಲಿ ಮಾಡುತ್ತಿದ್ದೆ. ಶ್ರೀಮಾತೆಯವರು ಏನಾದರೂ ಹೇಳುವರೇ, ನೋಡೋಣ ಎಂದು ಯೋಚಿಸಿದೆ. *'ಮಾಯೇರ್ ಕಥಾ'* (ಶ್ರೀಮಾತೆಯವರ ಮಾತುಗಳು) ಗ್ರಂಥವನ್ನು ಬಿಡಿಸಿದೆ. ತೆಗೆಯುತ್ತಲೇ ಎಲ್ಲಿ ದೃಷ್ಟಿ ಬಿತ್ತೋ, ಅಲ್ಲಿ ಏನು ಬರೆದಿದೆಯೋ ಅದನ್ನು ಓದಿದೆ. ಅಲ್ಲಿ ಹೀಗೆ ಬರೆದಿತ್ತು, "ಯಾರಿಗಾದರೂ ಪ್ರತಿದಿನ ಈಶ್ವರನ ದರ್ಶನವಾಗುತ್ತದೇನು? ಠಾಕೂರರು ಹೇಳುತ್ತಿದ್ದರು, 'ಗಾಳ ಹಿಡಿದರೆ, ಕೆಲವು ದಿನ ಸಿಕ್ಕುತ್ತೆ, ಕೆಲವು ದಿನ ಸಿಗುವುದಿಲ್ಲ. ಈ ಕಾರಣದಿಂದ ಪ್ರಯತ್ನಿಸುವುದನ್ನು ಬಿಟ್ಟು ಬಿಡಬೇಕೇನು? ........ಇಷ್ಟೊಂದು ಚಂಚಲವಾದರೆ ಏನು ಗತಿ? ಏನು ದೊರೆತಿದೆಯೋ ಅದನ್ನು ಹಿಡಿದಿರು. ಬೇರೆಯವರು ಯಾರಾದರೂ ನಿನ್ನವರು ಎಂದು ಕರೆಯಬಹುದಾದವರು ಇದ್ದಾರೆಯೋ ಇಲ್ಲವೋ ತಿಳಿಯದು. **ನಾನಂತೂ ನಿನ್ನ ತಾಯಿ, ಇದ್ದೇ ಇದ್ದೇನೆ. ಠಾಕೂರರ ಮಾತು ಜ್ಞಾಪಕವಿಲ್ಲವೇ? ಯಾರು ಅವರನ್ನು ಆಶ್ರಯಿಸಿದ್ದಾರೋ ಅವರ ಮುಂದೆ ಖಂಡಿತವಾಗಿಯೂ ಠಾಕೂರರು ಪ್ರಕಟವಾಗುತ್ತಾರೆ. ಇಲ್ಲದಿದ್ದರೆ ನಿನ್ನ ಕಡೆಯ ದಿನದಲ್ಲಿ ಅವರು ಸ್ವಯಂ ಬಂದು ಕರೆದೊಯ್ಯುತ್ತಾರೆ.**"

ನಾನು ಗದಾಧರ ಆಶ್ರಮದಲ್ಲಿದ್ದಾಗಿನ ಮಾತು. ಒಂದು ದಿನ ಅಲ್ಲಿನ ಒಬ್ಬ ಭಕ್ತ ಕೇಳಿದ, "ಈಗಲೂ ಕೂಡಾ ಶ್ರೀಮಾತೆಯವರು ನಿಮಗೆ ಉಪದೇಶ ಕೊಡುತ್ತಾರೇನು?" ನಾನು ತಲೆಯಲ್ಲಾಡಿಸಿ ಹೇಳಿದೆ, "ಹೌದು, ಕೊಡುತ್ತಾರೆ." "ಆದರೆ ಈಗ ಅವರು ಸ್ಥೂಲ ಶರೀರದಲ್ಲಿಲ್ಲ. ಸ್ಥೂಲ ಶರೀರದಲ್ಲಿ ಅವರು ಯಾವ ಉಪದೇಶಗಳನ್ನು ಕೊಟ್ಟರೋ, ಅವುಗಳು ಪುಸ್ತಕಗಳಲ್ಲಿ ಮುದ್ರಿತವಾಗಿವೆ. ಆದರೆ ಅವರು ಈಗ ಸಂಕೇತಗಳ ಮೂಲಕ ಉಪದೇಶ ಕೊಡುತ್ತಾರೆ. ಆ ಸಂಕೇತಗಳ ಆವರಣವನ್ನು ತೆಗೆದರೆ, ಅದರಲ್ಲಿ ಬಹಳ ದೊಡ್ಡ ಸತ್ಯವೇ ಪ್ರಕಟವಾಗಿರುವುದನ್ನು ನೋಡಬಹುದು."

"ಅದು ಹೇಗೆ?"

"ಯಾವಾಗ 'ಚಟ್‌ಗಾವ್' ನಿಂದ ಹಿಡಿದು 'ಕೊಲಿಕೊಕಾ' ವರೆಗೂ ಬಾಂಬು ಬೀಳುತ್ತಿತ್ತೋ, ಆಗ ಕೊಲ್ಕತಾದಲ್ಲಿ ಅವಶ್ಯಕ ಪದಾರ್ಥಗಳ ಅಭಾವ ಬಹಳವಾಗಲಾರಂಭಿಸಿತು. ಆಗಾಗ, ನಲ್ಲಿಯ ನೀರೂ ನಿಂತು ಹೋಗುತ್ತಿತ್ತು. ಈಗ ಗದಾಧರ ಆಶ್ರಮ ಹೇಗೆ ನಡೆಯುತ್ತೆ ಅಂತ ಅನ್ನಿಸುತ್ತಿತ್ತು. ಮತ್ತೆ ಸಾಲದ್ದಕ್ಕೆ ಆಶ್ರಮದ ಕಟ್ಟಡ ಕೂಡ ಹಳೆಯದಾಗಿತ್ತು. ಸ್ವಪ್ನದಲ್ಲಿ ನೋಡಿದೆ, ಮಾತೆಯವರು ಮಡಿಲಲ್ಲಿ ಗಣೇಶನನ್ನು ಎತ್ತಿಕೊಂಡಿದ್ದಾರೆ. ಆಗ ತಿಳಿದುಕೊಂಡೆ, "ಭಯವಿಲ್ಲ. ಶ್ರೀಮಾತೆಯವರು ನನ್ನನ್ನು ಮಡಿಲಲ್ಲಿ ತೆಗೆದುಕೊಂಡಿದ್ದಾರೆ" ಎಂದು.